# ಸೇತುಪತಿಯ ಸಂಕಷ್ಟ



ವಿಜಯ್ ಗುರುನಾಥ ಸೇತುಪತಿ ಕಾಳಿಮುತ್ತು! ನಾಲ್ವರ ಹೆಸರಲ್ಲವಿದು, ಒಬ್ಬನದೇ ಹೆಸರು. ಆದರೆ ಈಗ ದಿನಕ್ಕೆ ಹತ್ತಿಪ್ಪತ್ತು ಸಲ ಈ ಹೆಸರು ಟೀವಿ, ಪತ್ರಿಕೆಗಳಲ್ಲಿ ಕಾಣಸಿಗುತ್ತಿದೆ. ತಮಿಳಿನಲ್ಲಿ 30ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಹೀರೊ ಆಗಿ ನಟಿಸಿ, ತನ್ನದೇ ಆದ ಜನಪ್ರಿಯತೆಯನ್ನು ಗಳಿಸಿರುವ ನಟ, ನಿರ್ಮಾಪಕ, ಚಿತ್ರಸಾಹಿತಿ, ಗಾಯಕ, ಸಂಭಾಷಣೆಕಾರ, ಡಬ್ಬಿಂಗ್ ಕಲಾವಿದ ಈ ಸೇತುಪತಿ. ಈಗ ಸೇತುಪತಿಯ ಹೆಸರು ವಿವಾದಕ್ಕೆ ಸಿಕ್ಕು ಮಾಧ್ಯಮಗಳಲ್ಲಿ ಮಿಂಚಲು ಕಾರಣ '800' ಎನ್ನುವ ಸಿನಿಮಾ.

ಕ್ರಿಕೆಟ್ ಜಗತ್ತಿನ ಅದ್ವಿತೀಯ ಸ್ಪಿನ್ ಬೌಲರ್, ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ ಜೀವನ ಆಧಾರಿತ ಸಿನಿಮಾದ ಹೆಸರು '800'. ಭಾರತದಿಂದ ಶ್ರೀಲಂಕಾಗೆ ವಲಸೆ ಹೋದ ತಮಿಳು ಕುಟುಂಬದ ಕುಡಿ ಮುರಳಿ, ಕ್ರಿಕೆಟ್ ಜಗತ್ತಿನಲ್ಲಿ ದಂತಕಥೆಯಾಗಿ ಬೆಳೆದದ್ದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. 800 ವಿಕೆಟ್‌ಗಳನ್ನು ಕಬಳಿಸಿ ವಿಶ್ವ ಕ್ರಿಕೆಟ್‌ನಲ್ಲಿ ಸಾರ್ವಕಾಲಿಕ ದಾಖಲೆ ಸೃಷ್ಟಿಸಿದ ಮುರಳಿಯ ತಂದೆತಾಯಿ ಚಹಾ ತೋಟವೊಂದರಲ್ಲಿ ಕಾರ್ಮಿಕರಾಗಿದ್ದವರು. ಬಡತನದಲ್ಲಿ ಜನಿಸಿ, ಸಿಂಹಳೀಯರು ಮತ್ತು ತಮಿಳರ ನಡುವಣ ಅಂತರ್ಯುದ್ಧದ ಮಧ್ಯೆ ಬೆಳೆದು ವಿಶ್ವಕ್ರಿಕೆಟ್‌ನಲ್ಲಿ ಸಾಧನೆಯ ಉತ್ತುಂಗಕ್ಕೇರಿದ ಮುರಳಿಯ ಜೀವನವನ್ನು ಇಟ್ಟುಕೊಂಡು ಸಿನಿಮಾ ಮಾಡಿದರೆ ಪ್ರೇಕ್ಷಕರು ಮೆಚ್ಚದಿದ್ದಾರೆಯೆ ಎನ್ನುವ ನಿರ್ಮಾಪಕ ನಿರ್ದೇಶಕರ ಲೆಕ್ಕಾಚಾರ ತಪ್ಪೇನೂ ಅಲ್ಲ. ಆದರೆ ವಿಜಯ್ ಸೇತುಪತಿ ಎಂಬ ನಟ ಮುರಳೀಧರನ್ ಪಾತ್ರ ಮಾಡುವುದನ್ನು ಈಗ ತಮಿಳುನಾಡಿನ ದೊಡ್ಡದೊಂದು ಪ್ರೇಕ್ಷಕ ವರ್ಗ ತಪ್ಪು ಎನ್ನುತ್ತಿದೆ. ಅದಕ್ಕೆ ಕಾರಣ ಶ್ರೀಲಂಕಾದಲ್ಲಿ ಮಹೀಂದ್ರ ರಾಜಪಕ್ಷ ಅಧ್ಯಕ್ಷರಾಗಿದ್ದಾಗ ನಡೆದ ತಮಿಳರ ನರಮೇಧ. 'ತಮಿಳು ಉಗ್ರ ಸಂಘಟನೆಗಳನ್ನು ಮಿಲಿಟರಿ ಬಳಸಿ ಮಟ್ಟ ಹಾಕಿದ ರಾಷ್ಟ್ರಾಧ್ಯಕ್ಷ ಮಹೇಂದ್ರ ರಾಜಪಕ್ಷ ಸರಕಾರವನ್ನು ಮುರಳೀಧರನ್ ಬೆಂಬಲಿಸಿದ್ದಾರೆ. ಅಂತಹ ಕ್ರಿಕೆಟಿಗನ ಪಾತ್ರವನ್ನು ಸಿನಿಮಾದಲ್ಲಿ ಸೇತುಪತಿ ನಿರ್ವಹಿಸಬಾರದು' ಎನ್ನುವುದು ಈಗ ತಮಿಳುನಾಡಿನಲ್ಲಿ ಕೆಲವರು ಎಬ್ಬಿಸಿರುವ ಕೂಗು.

ಶ್ರೀಲಂಕಾದಲ್ಲಿ ಅಲ್ಲಿನ ಸರಕಾರದ ವಿರುದ್ಧ ತಮಿಳು ಸಂಘಟನೆಗಳು ನಡೆಸಿದ ಯುದ್ಧಕ್ಕೆ ಮೂರು ದಶಕಗಳ ಸುದೀರ್ಘ ಇತಿಹಾಸವಿದೆ. ಎಲ್‌ಟಿಟಿಇ ಎನ್ನುವ ಸಂಘಟನೆಯನ್ನು ಬಗ್ಗುಬಡಿಯುವಾಗ ಎಷ್ಟು ಸಾವಿರ ತಮಿಳು ಕುಟುಂಬಗಳು ನಿರ್ನಾಮವಾಗಿವೆ ಎನ್ನುವ ಸರಿಯಾದ ಲೆಕ್ಕವೂ ಇಲ್ಲ. ಬಹುಸಂಖ್ಯಾತ ಸಿಂಹಳೀಯರ ಸರಕಾರದ ಆಗಿನ ದಮನಕಾರಿ ನೀತಿಯನ್ನು ಆಮ್ನೆಸ್ಟಿ ಸಂಸ್ಥೆಯೂ ಖಂಡಿಸಿದ್ದಿದೆ. ಹಾಗಾಗಿ ತಮಿಳುನಾಡಿನಲ್ಲಿ ರಾಜಪಕ್ಷ ವಿರುದ್ಧ ತಮಿಳರ ಜನಾಭಿಪ್ರಾಯ ರೂಪುಗೊಂಡಿದ್ದು ಅಸಹಜವೇನೂ ಅಲ್ಲ. ಆದರೆ, ಅದಕ್ಕೂ, '800' ಸಿನಿಮಾದಲ್ಲಿ ಸೇತುಪತಿ ನಟಿಸುವುದಕ್ಕೂ ಸಂಬಂಧ ಕಲ್ಪಿಸುವುದು ಎಷ್ಟು ಸರಿ... ಎನ್ನುವ ಪ್ರಶ್ನೆ ಈಗ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಯ ಕಾವೇರಿಸಿದೆ. ಟ್ವಿಟ್ಟರ್‌ನಲ್ಲಿ 'ಸೇತುಪತಿಯ ಮಗಳ ಮೇಲೆ ಲೈಂಗಿಕ ಹಿಂಸೆ ನಡೆದಿದ್ದರೆ ಶ್ರೀಲಂಕಾ ತಮಿಳರ ನೋವು ಆತನಿಗೂ ಗೊತ್ತಾಗುತ್ತಿತ್ತು' ಎಂದೊಬ್ಬ ಕಾಮೆಂಟ್ ಹಾಕಿದ್ದು ಪೊಲೀಸ್ ಕೇಸ್ ದಾಖಲಾಗಿದೆ. ಪರಿಸ್ಥಿತಿಯ ಉದ್ವಿಗ್ನತೆಯನ್ನು ಅರಿತು ಸ್ವತಃ ಕ್ರಿಕೆಟಿಗ ಮುತ್ತಯ್ಯ ಮುರಳೀಧರನ್, ಸಿನಿಮಾದಿಂದ ಹಿಂದೆ ಸರಿಯುವಂತೆ ಸೇತುಪತಿಗೆ ಮನವಿ ಮಾಡಿದ್ದಾರೆ. ಒಪ್ಪಿಕೊಂಡು ಸೇತುಪತಿ ಸಿನಿಮಾದಿಂದ ಹಿಂದಕ್ಕೆ ಸರಿದೂ ಆಗಿದೆ.

ಈ ಚಿತ್ರದಲ್ಲಿ ನಟಿಸಲು ಮೊದಲು ತಮಿಳಿನ ಸೂಪರ್‌ಸ್ಟಾರ್ ವಿಜಯ್‌ಗೆ ಆಹ್ವಾನ ಬಂದಿತ್ತು. ಆದರೆ ತೊಂದರೆಯಾಗಬಹುದು ಎನ್ನುವ ಕಾರಣಕ್ಕೆ ವಿಜಯ್ ಒಪ್ಪಿರಲಿಲ್ಲ. ಬಳಿಕ ಸೇತುಪತಿಯನ್ನು ಕೋರಿದಾಗ ಆತ ಒಪ್ಪಿಕೊಂಡು, ಚಿತ್ರದ ವಿಭಿನ್ನ ಪೋಸ್ಟರ್ ಕೂಡಾ ಬಿಡುಗಡೆಯಾಗಿತ್ತು.

ಹಾಗೆ ನೋಡಿದರೆ ವಿಜಯ್ ಸೇತುಪತಿ ಕೂಡಾ ರಾತ್ರಿ ಬೆಳಗಾಗುವುದರೊಳಗೆ ಸ್ಟಾರ್ ಆದವರಲ್ಲ; ಕ್ರಿಕೆಟ್‌ನಲ್ಲಿ ಮುರಳಿ ಪಟ್ಟದ್ದಕ್ಕಿಂತ ಹೆಚ್ಚು ಕಷ್ಟಗಳನ್ನು ಚಿತ್ರರಂಗದಲ್ಲಿ ಸೇತುಪತಿ ಎದುರಿಸಿ ಬೆಳೆದವರು. ಸೇತುಪತಿ ಬಾಲ್ಯದಲ್ಲಿ ಕಲಿತದ್ದು ಕೋಡಂಬಾಕಂನ 'ಎಂಜಿಆರ್ ಹೈಯರ್ ಪ್ರೈಮರಿ ಸ್ಕೂಲ್'ನಲ್ಲಿ. ಹಾಗೆಂದು ಆಗಲೇ ಚಿತ್ರನಟನಾಗುವ ಕನಸು ಕಂಡವನಲ್ಲ. ಬಿಕಾಂ ಪಾಸ್ ಆದ ಬಳಿಕ ಕುಟುಂಬವನ್ನು ಸಾಕಲು ಅಕೌಂಟೆಂಟ್ ಆಗಿ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದರು. ಅಲ್ಲಿ ಸಂಬಳ ಕಡಿಮೆ ಎಂದಾದಾಗ ದುಬೈಗೆ ತೆರಳಿ ಅಲ್ಲಿ ಅಕೌಂಟೆಂಟ್ ಆಗಿ ದುಡಿದರು. 2003ರಲ್ಲಿ ಅಲ್ಲಿಂದ ಚೆನ್ನೈಗೆ ಮರಳಿ ಗೆಳೆಯರ ಜೊತೆ ಸೇರಿ ಸ್ವಂತ ಬಿಸಿನೆಸ್ ಆರಂಭಿಸಿದರು. ಅದನ್ನೂ ಬಿಟ್ಟು ರಂಗಭೂಮಿಯ ಸಂಸ್ಥೆಯೊಂದರಲ್ಲಿ ಅಕೌಂಟೆಂಟ್ ಮತ್ತು ನಟ ಎರಡೂ ಕೆಲಸಕ್ಕೆ ಸೇರಿಕೊಂಡರು.

ಆರಂಭದಲ್ಲಿ ಐದು ವರ್ಷ ಸೇತುಪತಿ ಕೂಡಾ ಚಿತ್ರರಂಗದಲ್ಲಿ ಕಷ್ಟಪಟ್ಟು ಸೈಕಲ್ ಹೊಡೆದಿದ್ದಾರೆ. ಸಣ್ಣಪುಟ್ಟ ಪಾತ್ರಗಳಲ್ಲಿಯೇ ಅಲ್ಪತೃಪ್ತಿ ಕಂಡಿದ್ದಾರೆ. ಟೀವಿ ಸೀರಿಯಲ್‌ಗಳಲ್ಲಿ ನಟಿಸಿದ್ದಾರೆ. 2010ರಲ್ಲಿ ಸೀನು ರಾಮಸ್ವಾಮಿ ನಿರ್ದೇಶನದ 'ತೇನ್‌ಮೆರ್ಕು ಪರುವಕಾಟ್ರು' ಸಿನಿಮಾದಲ್ಲಿ ಹೀರೊ ಪಾತ್ರ ಸಿಕ್ಕಿದ್ದು ಬದುಕು ಬದಲಾಯಿಸಿತು. ಅದರಲ್ಲಿ ಕುರುಬನ ಪಾತ್ರ. ಚಿತ್ರಕ್ಕೆ ಮೂರು ರಾಷ್ಟ್ರಪ್ರಶಸ್ತಿಗಳು ಸಿಕ್ಕಿದವು. ಬಳಿಕ 2012ರಲ್ಲಿ ತೆರೆಗೆ ಬಂದ 'ಪೀಜಾ' ಮತ್ತು 'ನಡುವಿಲ್ ಕೊಂಜಂ ಪಕ್ಕತ್ತ ಕಾನುಂ' ಚಿತ್ರಗಳು ಹಿಟ್ ಆದದ್ದು ಅದೃಷ್ಟ ಖುಲಾಯಿಸಿತು. ಈಗ ವಿಜಯ್ ಸೇತುಪತಿ ಎಂದರೆ ತಮಿಳು ಚಿತ್ರರಂಗದಲ್ಲಿ ತಕ್ಕಮಟ್ಟಿಗೆ ದೊಡ್ಡ ಹೆಸರೇ.

ಈ ಹಿಂದೆ 1994ರಲ್ಲಿ 'ನಮ್ಮವರ್' ಎನ್ನುವ ಸಿನಿಮಾಕ್ಕೆ ಆಡಿಷನ್ ಆದಾಗ ಇದೇ ಸೇತುಪತಿ 'ಎತ್ತರ ಸಾಕಷ್ಟಿಲ್ಲ' ಎನ್ನುವ ಕಾರಣಕ್ಕೆ ರಿಜೆಕ್ಟ್ ಆದದ್ದುಂಟು. ಆದರೆ ಒಮ್ಮೆ ಭೇಟಿಯಾದಾಗ ನಿರ್ದೇಶಕ ಬಾಲು ಮಹೇಂದ್ರ 'ನಿನಗೆ ಫೋಟೊಜೆನಿಕ್ ಫೇಸ್ ಇದೆ' ಎಂದದ್ದು ಸೇತುಪತಿ ಮನಸ್ಸಿಗೆ ನಾಟಿತ್ತು. 'ವಿಕ್ರಂ ವೇದಾ' ಎನ್ನುವ ಚಿತ್ರ ಸೂಪರ್ ಡೂಪರ್ ಹಿಟ್ ಆದ ಬಳಿಕವಂತೂ ಸೇತುಪತಿಗೂ ದೊಡ್ಡ ಅಭಿಮಾನಿ ಬಳಗ ಸೃಷ್ಟಿಯಾಯಿತು.

ಫೇಸ್‌ಬುಕ್‌ನಲ್ಲಿ ಪರಿಚಯವಾಗಿ ಪ್ರೀತಿಸಿದ ಜೆಸ್ಸಿಯನ್ನು 2003ರಲ್ಲಿ ಭಾರತಕ್ಕೆ ಮರಳಿಬಂದು ಮದುವೆಯಾದ ಸೇತುಪತಿಗೆ ಮೂವರು ಮಕ್ಕಳು. ಎರಡು ಗಂಡು, ಒಂದು ಹೆಣ್ಣು. ವೈಯಕ್ತಿಕವಾಗಿ ನಿರೀಶ್ವರವಾದಿ. ಮೆಲುಮಾತಿನ ಸ್ವಭಾವವಾದರೂ, ಮೂಢನಂಬಿಕೆಗಳ ಬಗ್ಗೆ ಸೇತುಪತಿಯದ್ದು ಸದಾ ಕಟು ವಿರೋಧ. ಈ ಸ್ವಭಾವವನ್ನು ಮೆಚ್ಚದವರೂ ಈಗ ಸೇತುಪತಿಯ ವಿರುದ್ಧ ಗುಟುರು ಹಾಕುತ್ತಿದ್ದಾರೆ ಎನ್ನುವ ಸುದ್ದಿಯಿದೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65